ಅಧ್ಯಕ್ಷರು.—ವಿಚಾರಣೆ ಮಾಡಿ ಎಂದು ಕೇಳುತ್ತಿದ್ದೀರಲ್ಲಾ ಈಗ ಸಾಕ್ಷಿ ಎಲ್ಲಿ ಹಿಗುತ್ತದೆ ? ಇದು ೧೯೮೩ ನೇ ಇಸವಿಯಿಂದ ೧೯೮೬-೮೭ ಇಸವಿಯವರೆಗೆ ಆಗಿರುವುದು. ಇದಕ್ಕೆ ಸಾಕ್ಷಿಯನ್ನು ಎಲ್ಲಿ ಹುಡುಕುತ್ತೀರಿ ?

ಶ್ರೀ ಟಿ.ಬಿ. ಜಯಚಂದ್ರ.—ಫಾರಂ ಇವೆಯೆಲ್ಲಾ ಸ್ವಾಮಿ. ಸುಬಾಬೂಲ್‌ನ್ನು ಬೆಳೆಯುವುದಕ್ಕೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಇಷ್ಟು ಹೆಕ್ಟೇರ್, ಫಾರೆಸ್ಟ್‌ನಲ್ಲಿ ಇಷ್ಟು ಹೆಕ್ಟೇರ್ ಎಂದು ಹೇಳಿದಾರೆ. ಫಾರಂನಲ್ಲಿ ಒಂದು ಗಿಡವಾದರೂ ಇರಬೇಕಲ್ಲ. ಅದನ್ನು ಎನ್‌ಕ್ವೈರಿ ಮಾಡಿಸಿ. ಯಾರು ಏನು ತಪ್ಪು ಮಾಡಿದ್ದಾರೆ, ಅವರಿಗೆ ಯಾವ ಶಿಕ್ಷೆ ಕೊಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಮಗೆ ಹೇಗೆ ಅಸಂಭವ ಎಂದು ಮನವರಿಕೆಯಾಗಿದೆಯೋ ಅದೇ ರೀತಿ ನನಗೂ ಕೂಡಾ ಆಗಿದೆ. ಅದಕ್ಕಾಗಿ ನಾನು ಅದನ್ನು ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಇತರೆ ರಾಜ್ಯಗಳಿಂದ ಕಾರುಗಳ ಖರೀದಿ

೫೩೮ (೧೬೮೭) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಾರುಗಳನ್ನು ಕೊಳ್ಳುವಾಗ ನಮ್ಮ ರಾಜ್ಯದವರು ಹೊರ ರಾಜ್ಯಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ ಸರ್ಕಾರ ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ.ಜೆ. ಜಾರ್ಜ್(ಸಾರಿಗೆ ಸಚಿವರು).—

ಅ) ಈ ವಿಷಯವು ಸಾರಿಗ ಇಲಾಖಾ ವ್ಯಾಪ್ತಿಯಲ್ಲಿ ಬರುವುದಿಲ್ಲ, ಕಾರಣ ಹೊರರಾಜ್ಯದಲ್ಲಿ ನಮ್ಮ ರಾಜ್ಯದವರು ಕಾರುಗಳನ್ನು ಕೊಳ್ಳುವಾಗ ಈ ಇಲಾಖೆಯಿಂದ ಯಾವುದೇ ರೀತಿಯ ಅನುಮತಿ ಪಡೆಯಬೇಕಾದ ಅಗತ್ಯವಿಲ್ಲ.

ಆ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ನಗರದಲ್ಲಿ ನಗರ ಸಾರಿಗೆ ಸೌಲಭ್ಯ

೫೪೨ (೧೫೨೭) ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಚಿಕ್ಕಮಗಳೂರು ನಗರದಲ್ಲಿ ಒಂದು ನಗರ ಸಾರಿಗೆ ಬಸ್ಸನ್ನು ಓಡಿಸುವುದು ಅಗತ್ಯವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಕುರಿತಂತೆ ತೆಗೆದುಕೊಂಡ ಕ್ರಮವೇನು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಸಚಿವರು),—

ಅ) ಚಿಕ್ಕಮಗಳೂರನ್ನು ನಗರವೆಂದು ಘೋಷಿಸಿಲ್ಲದ ಕಾರಣ ನಗರ ಸಾರಿಗೆ ಬಸ್ಸುಗಳನ್ನು ಓಡಿಸುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.